ಕುದುರೆಯ ಮೇಲೆ ಕುಳಿತು ನಡೆದ. ಹಿಂದೆ ಅವನ ಸೈನ್ಯ ಸಾಗರದಂತೆ ಹೊರಟಿತು.

ರಾತ್ರಿಯಾಗಿತ್ತು. ಪ್ರವಚನ ಕೇಳಿದ ಮೇಲೆ ಹಾಗೂ ಕಳಿಂಗದ ರಾಜತಾಂತ್ರಿಕತೆಯ ಸಲುವಾಗಿ ಸತತ ಸಭೆಗಳಿಂದ ಮಹಾರಾಜರು ದಣಿದಿದ್ದರು. ಅವರು ಅಸಾಂಧಿಮಿತ್ರಳ ಅಂತಃಪುರದಲ್ಲಿ ಒಬ್ಬರೇ ಮಲಗಿದ್ದರು. ಗಾಢವಾಗಿ ನಿದ್ರೆ ಆವರಿಸಿಕೊಂಡಿತ್ತು. ಎದುರಿಗೆ ಏನೋ ಶಬ್ದ. ಒಮ್ಮೆಲೆ ಕಣ್ಣು ತೆರೆದರು. ಬಿಳಿಯ ಪಂಚೆ ಉಟ್ಟ ಒಂದು ಆಕೃತಿ ಅವರ ಮುಂದೆ ನಿಂತಿತ್ತು. ದಿಗ್ಗನೆ ಎದ್ದು ಕುಳಿತರು. ಅದೇ ಸುಶೀಮನ ಮಗ. ನಿಗ್ರೋಧ ಅಂತಃಪುರ ಪ್ರವೇಶಿಸಿ, ಎದುರಿಗೆ ನಿಂತಿದ್ದಾನೆ. ಅವನು ಇಂದು ಕಾಷಾಯಾಂಬರ ಬಿಟ್ಟು ಬರೀ ಬಿಳಿಬಟ್ಟೆ ಧರಿಸಿ ಬಂದಿದ್ದಾನೆ. ಅಶೋಕರಿಗೆ ನಿಜವಾಗಿಯೂ ಗಾಬರಿಯಾಯಿತು. ಬೌದ್ಧ ಕುಟೀರಗಳಲ್ಲಿ ಆತ್ಮರಕ್ಷಣೆಗಾಗಿ ದೇಹವನ್ನು ಕಬ್ಬಿಣವಾಗಿಸುವ ವಿದ್ಯೆಯನ್ನು ಕಲಿಸಲಾಗುತ್ತದೆಯಂತೆ. ಅದನ್ನು ಕಲಿತು ತನ್ನ ಮುಗಿಸಲು ಬಂದಿರುವನೇನು ಎಂದು ಮನದಲ್ಲಿ ಯೋಚಿಸಿದರು. 'ನಿನ್ನ ಖಡ್ಗ ತೆಗಿ. ನನ್ನ ಕೊಂದು ಬಿಡು. ನಿನ್ನ ಹತ್ತು ದಿನದ ಬೋಧನೆಯ ದಕ್ಷಿಣೆ ಕೊಡಬೇಕಲ್ಲ. ಅದು ನನ್ನ ಸಾವೇ ಆಗಲಿ' ಎಂದು ಕೈಮುಗಿದು ನಿಂತರು. ಪೊಟರೆಯಲ್ಲಿರುವ ಪಾರಿವಾಳಗಳು ಗುಟರು ಹಾಕುತ್ತಿದ್ದವು.

ಆ ಹುಡುಗನಿಗೆ ನಗು ಬಂತು, 'ಚಿಕ್ಕಪ್ಪ...' ಎಂದು ದೀರ್ಘವಾದ, ಸ್ವರದಿಂದಲೇ ಹೇಳಿದ. ಕೊಲ್ಲುವುದು ರಾಜನ ಕೆಲಸ. ಬೌದ್ಧ ಸನ್ಯಾಸಿಯದು ಬದುಕಿಸುವ ಕೆಲಸ, ನನಗೆ ಕಾವಿ ಬಟ್ಟೆ ಹಾಕಿಕೊಂಡು ರಕ್ತ ಸಂಬಂಧಿಗಳ ಜೊತೆ ಮಾತಾಡಲು ನಿಬಂಧನೆಗಳಿವೆ. ಅದಕ್ಕಾಗಿ ಈ ಬಿಳಿ ಬಟ್ಟೆ ಧರಿಸಿಕೊಂಡು ನಿನ್ನ ಮಗನಾಗಿ ಇಲ್ಲಿಗೆ ಬಂದಿದ್ದೇನೆ' ಎಂದು ಅಶೋಕನನ್ನು ಬಿಗಿಯಾಗಿ ಅಪ್ಪಿಕೊಂಡ. ತನ್ನ ತಂದೆಯನ್ನು ಅಪ್ಪಿಕೊಂಡಷ್ಟೇ ಆನಂದವಾಯಿತು ನಿಗ್ರೋಧನಿಗೆ. ಅಶೋಕರಿಗೆ ಖುಷಿಯಾಯಿತು. ಆ ಹುಡುಗನ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ತನ್ನ ನಂತರದ, ಈ ಸಾಮ್ರಾಜ್ಯದ ಆಡಳಿತಕ್ಕಾಗಿ ನೀನು ಬರಬೇಕು ಎಂದು ಬೇಡಿಕೊಂಡರು. ಆ ಹುಡುಗ ನಕ್ಕ. 'ಪುನರ್ ಭವದಿಂದ ಪಾರಾಗಲು ಮಾರ್ಗ ಹುಡುಕುತ್ತಿದ್ದೇನೆ. ನೀನು ನನಗೆ ಕತ್ತಿ-ಗುರಾಣಿ ಕೊಟ್ಟು ಯುದ್ಧ ಮಾಡುವ ಕನಸಿನ ಆಯುಧ ಕೊಡುತ್ತೀಯಾ? ಚಿಕ್ಕಪ್ಪ ನಾನು ರಾಜನಾಗುವ ಮಾತು ಮರೆತು ಬಿಡು' ಎಂದು ಹೇಳಿದ.

'ನನ್ನ ಅತ್ತಿಗೆ ಎಲ್ಲಿದ್ದಾರೆ? ಹೇಗಿದ್ದಾರೆ?'

'ತನ್ನ ತಾಯಿ ಅದೇ ಆಶ್ರಮದಲ್ಲಿ ಎಲ್ಲಾ ಬಿಕ್ಕುಗಳಿಗೆ ತಾಯಿಯಾಗಿ ಆನಂದವಾಗಿದ್ದಾಳೆ. ನಾನು ಪರ್ಯಟನ ನೆಪದಲ್ಲಿ ಇಲ್ಲಿಗೆ ಬಂದಿದ್ದೇನೆ'.

ಅಂದು ಬೆಳಗಿನವರೆಗೂ ಕರಳುಬಳ್ಳಿಯ ವಿಷಯಗಳು, ರಾಜಕೀಯ, ಸಾಮಾಜಿಕ ವಿಷಯಗಳು ಧಾರ್ಮಿಕ ವಿಷಯಗಳು, ಚರ್ಚಿಸಿ, ಅಲ್ಲೇ ಪವಡಿಸಿದರು. ಅಶೋಕ ಮಹಾರಾಜರಿಗೆ ಒಂದು ನಿರುಮ್ಮಳ ಭಾವ ಸಮೀಪದಲ್ಲಿ ಸುತ್ತಾಡುತ್ತಲಿದೆ ಅನಿಸುತ್ತಿತ್ತು.

ಅತ್ತ ಅಸಾಂಧಿಮಿತ್ರೆ ಹಾಗೂ ಮಹಾವಿಸ್ಮಯಶುಂಗ ಆಗಲೇ ಮಹಾಸೈನ್ಯದೊಂದಿಗೆ ಕಳಿಂಗ ತಲುಪಿದ್ದರು. ಅಸಾಂಧಿಮಿತ್ರೆ ಅಶೋಕರ ಹಾಗೂ ನಿಗ್ರೋಧನ ಯಾವ ಮಾತುಗಳನ್ನು ಅಷ್ಟು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆಕೆ ಅನಂತ ಪದ್ಮನಾಭನ ಯಾವ ಸಂಧಿಯ ಒಡಂಬಡಿಕೆಯನ್ನು ಒಪ್ಪಲಿಲ್ಲ. ಶರಣಾಗತಿ ಇಲ್ಲವಾದರೆ ಯುದ್ಧ ಎಂಬ ಸಂದೇಶದೊಂದಿಗೆ ಅವರು ದಯಾನದಿಯ ತಟ ತಲುಪಿದ್ದರು. ಅನಂತ ಪದ್ಮನಾಭ, 'ನಮ್ಮದು ಸಣ್ಣ ರಾಜ್ಯ, ಯಾಕೆ ದಾಳಿ ಮಾಡಲು ಮುಂದಾಗುತ್ತೀರಿ. ನಮ್ಮನ್ನು ಸ್ವತಂತ್ರರಾಗಿರಲು ಬಿಡಿ' ಎಂಬ ಸಂದೇಶ ಕಳುಹಿಸಿದ. ಆದರೂ ಅಸಾಂಧಿಮಿತ್ರೆ ಮಹಾವಿಸ್ಮಯ ಶುಂಗ, ಯುದ್ಧ ಘೋಷಿಸಿಯೇ ಬಿಟ್ಟರು.

ಅದೇ ದಯಾನದಿ ಹಾಗೆಯೇ ತಣ್ಣಗೆ ಮಲಗಿಕೊಂಡಿತ್ತು. ಪಾಟಲೀಪುತ್ರದಿಂದ ಮತ್ತೆ ಮೂರು ಲಕ್ಷ ಸೈನಿಕರು ಬಂದು ಸೇರಿಕೊಂಡರು. ಅನಂತ ಪದ್ಮನಾಭನ ಎರಡು ಲಕ್ಷ ಸೈನ್ಯ ಪಾಟಲಿಪುತ್ರದ ನಾಲ್ಕು ಲಕ್ಷ ಸೈನ್ಯ ಮುಖಾಮುಖಿಯಾದವು. ದಯಾನದಿಯ ತುಂಬಾ ರಕ್ತದ ಮಡವು. ಸತ್ತವರು ಯಾರು? ಉಳಿದವರು ಯಾರು? ಘೋರ ಸಂಘರ್ಷದ ಘಳಿಗೆ ಅದು. ಅಶೋಕ ಎಂಟು ದಿನಗಳ ಕಾಲ ಪ್ರವಚನ ಮುಗಿಸಿ ವಿಶೇಷ ರಥದಲ್ಲಿ ಕಳಿಂಗ ತಲುಪಿದ್ದರು. ದಾರಿಯುದ್ದಕ್ಕೂ ನಿಗ್ರೋಧ ಹೇಳಿದ್ದ ಮಾತು ನೆನಪಿಗೆ ಬಂತು. 'ಯಾವ ಕಾರಣಕ್ಕೂ ಯುದ್ಧ ಮಾಡುವುದು